**ಎಸ್ ಸಿ ನಂ.49/2024 CW.23 PW.17**

**ಆರೋಪಿತರ ಪರ ವಕೀಲರು ಕಲಂ 311 ಸಿ.ಆರ್.ಪಿ.ಸಿ. ಅಡಿಯಲ್ಲಿ ಹಾಕಿಕೊಂಡ ಅರ್ಜಿ ಮೇಲೆ ದಿನಾಂಕ 10.04.2026 ರಂದು ಮಾಡಿದ ಆದೇಶದ ಪ್ರಕಾರ ಸಾಕ್ಷಿಯನ್ನು ಇಂದು ದಿನಾಂಕ 29.06.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

14. ನಮ್ಮ ಠಾಣೆಯಿಂದ ಘಟನಾ ಸ್ಥಳಕ್ಕೆ 5 ಕಿ.ಮಿ ಅಂತರ ಇರುತ್ತದೆ. ಚಾಸಾ.1 ರವರು ದಿನಾಂಕ 11.03.2023 ರಂದು ದೂರು ಕೊಟ್ಟಿರುತ್ತಾರೆ ಎಂದರೆ ನಿಜ. ಸದರಿ ದೂರನ್ನು ಬೇರೆ ಕಡೆ ತಯಾರು ಮಾಡಿ ಕೊಂಡು ಬಂದು ನಮ್ಮ ಮುಂದೆ ಕೊಟ್ಟಿರುತ್ತಾರೆ ಎಂದರೆ ನಿಜ. ಅದೇ ರೀತಿಯಾಗಿ ಆರೋಪಿತರು ಕೂಡ ಪಿರ್ಯಾದುದಾರರ ವಿರುದ್ಧ ಪ್ರತಿ ದೂರು ಸಲ್ಲಿಸಿರುತ್ತಾರೆ ಎಂದರೆ ನಿಜ. ನಾನು ಘಟನಾ ಸ್ಥಳಕ್ಕೆ ಹೋದಾಗ ಆರೋಪಿತರಿಗೂ ಕೂಡ ಗಾಯಗಳಾಗಿದ್ದವು ಮತ್ತು ನಾನು ಅವರನ್ನು ಆಸ್ಪತ್ರೆಗೆ ಸೇರಿಸಿರುತ್ತೇನೆ ಎಂದರೆ ನಿಜ.

15. ಆರೋಪಿತರು ಚಾಸಾ.1 ರವರ ವಿರುದ್ಧ ದೂರು ಕೊಟ್ಟಿದ್ದರಿಂದ ಚಾಸಾ.1 ರವರ ಜೊತೆ ಶಾಮೀಲಾಗಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸ್ವೀಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಘಟನೆಯ ಸ್ಥಳಕ್ಕೆ ಹೋದಾಗ ಘಟನೆಗೆ ಸಂಬಂಧಪಟ್ಟಂತೆ ಯಾವುದೇ ಕುರುಹುಗಳು ಕಂಡು ಬಂದಿಲ್ಲ. ನಿಪಿ.2 ಮಹಜರ್ ಮಾಡುವ ಕಾಲಕ್ಕೆ ಅಕ್ಕ ಪಕ್ಕದಲ್ಲಿ ಮನೆಗಳು ಇದುದ್ದನ್ನು ನೋಡಿರುತ್ತೇನೆ. ಆ ಸಮಯದಲ್ಲಿ ಸದರಿ ಮನೆಗಳ ರಹವಾಸಿಗಳನ್ನು ಕರೆದು ಮಹಜರ್ ಗೆ ಸಹಿ ಮಾಡುವಂತೆ ಕೇಳಿಕೊಂಡಿರುವುದಿಲ್ಲ. ನಾನು ಯಾವುದೇ ಕೃತ್ಯ ನಡೆದ ಸ್ಥಳಕ್ಕೆ ಹೋಗದೆ ಠಾಣೆಯಲ್ಲೇ ಕುಳಿತು ನಿಪಿ.2 ರಂತೆ ಪಂಚನಾಮೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

16. ನಿಪಿ.3 ಫೋಟೋಗಳನ್ನು ನಾನು ಮತ್ತು ಪಿರ್ಯಾದಿ ಶಾಮೀಲಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಪಂಚರಿಗೆ ನೋಟೀಸ್ ಕೊಟ್ಟು ಸ್ಥಳಕ್ಕೆ ಹಾಜರು ಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ದಿನ ಚಾಸಾ.2, 3 ಮತ್ತು 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 12.03.2023 ರಂದು ಚಾಸಾ.5 ರಿಂದ 7 ಹೇಳಿಕೆಗಳನ್ನು ಪಡೆದು ಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ದಿನಾಂಕ 15.03.2023 ರಂದು ಚಾಸಾ. 2 ರಿಂದ 4 ರವರ ರಕ್ತದ ಮಾದರಿಗಳನ್ನು ಸಂಗ್ರಹಿಸಿ FSL ಗೆ ಕಳುಹಿಸಿಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.4 ಸತೀಶ ಇವರ ರಕ್ತದ ಗುಂಪು O +ve ಇರುತ್ತದೆ ಎಂದರೆ ನಿಜ. ಅದೇ ರೀತಿ ಚಾಸಾ.1 ಮತ್ತು 2 ಅಜಯ್ ಮತ್ತು ಉಮೇಶ ಇವರ ರಕ್ತದ ಗುಂಪು A +ve ಇರುತ್ತದೆ ಎಂದರೆ ನಿಜ. ದಿನಾಂಕ 21.03.2023 ರಂದು ನಾನು ಮುದ್ದೆ ಮಾಲು 1 ರಿಂದ 3 ಅನ್ನು FSL ಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಈ ಪ್ರಕರಣದ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಈ ಪ್ರಕರಣದಲ್ಲಿ ಗಾಯಾಳುಗಳೊಂದಿಗೆ ಶಾಮೀಲಾಗಿ ಆರೋಪಿತರಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದು ಗೊತ್ತಿದ್ದರೂ ಕೂಡ ಆರೋಪಿತರಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ.

**(**ಮಧ್ವೇಶ ಡಬೇರ**)**

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.